<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 04-03-2022.**</u>

**ಪಾಟೀ ಸವಾಲು - ಪ್ರತಿವಾದಿ 2 ರಿಂದ 4 ರವರ ಪರ ಶ್ರೀ. ಜೆ.ವಿ.ಆರ್., ವಕೀಲರಿಂದ**

4) ದಾವಾ ಸ್ವತ್ತುಗಳು ಮೂಲತಃ ಯಾರಿಗೆ ಸೇರಿದ್ದವು ಎಂದರೆ ನನ್ನ ತಂದೆಗೆ ಸೇರಿದ್ದವು. ಎಲ್ಲಾ ದಾವಾ ಆಸ್ತಿಗಳನ್ನು ನಾನು ನೋಡಿದ್ದೇನೆ. ನನಗೆ ಎಲ್ಲಾ ದಾವಾ ಸ್ವತ್ತುಗಳ ಚೆಕ್ಕುಬಂದಿಗಳನ್ನು ಹೇಳಲು ಬರುವುದಿಲ್ಲ. ಸಾಕ್ಷಿಗೆ ದಾವಾ ಸ್ವತ್ತುಗಳ ಪೈಕಿ ಒಂದು ಆಸ್ತಿಯ ಚೆಕ್ಕುಬಂದಿಯನ್ನಾದರೂ ಹೇಳಲು ಆಗುತ್ತದೆಯೇ ಎಂದು ಕೇಳಿದ್ದು, ಸಾಕ್ಷಿಯು ಸರ್ವೆ ನಂ.159 ಅದರ ಪೂರ್ವಕ್ಕೆ ನಾರಾಯಣಪ್ಪ, ಪಶ್ಚಿಮಕ್ಕೆ ರಾಮಣ್ಣ, ಉತ್ತರಕ್ಕೆ ಹಳ್ಳ ಮತ್ತು ದಕ್ಷಿಣಕ್ಕೆ ಜೀವೇಗೌಡ ಇವರ ಆಸ್ತಿಗಳು ಇರುತ್ತವೆ. ನನಗೆ ಬೇರೆ ಯಾವುದೇ ದಾವಾ ಸ್ವತ್ತುಗಳ ಚೆಕ್ಕುಬಂದಿಗಳು ಗೊತ್ತಿರುವುದಿಲ್ಲ. ನಾನು ಮದುವೆಯಾಗಿ ಹೋದ ನಂತರ ದಾವಾ ಸ್ವತ್ತುಗಳನ್ನು ನೋಡೇ ಇಲ್ಲ ಎಂದರೆ ನೋಡಿದ್ದೇನೆ. ನಾನು ದಾವಾ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನ ಹೊಂದಿಲ್ಲ ಎಂದರೆ ನನ್ನ ತಂದೆ ಮತ್ತು ನಮ್ಮ ಅಣ್ಣ ಮಾಡುತ್ತಾರೆ, ನಾನು ಜೊತೆಯಲ್ಲಿ ವ್ಯವಸಾಯ ಮಾಡುವುದಿಲ್ಲ. ನನ್ನ ಮದುವೆಯಾಗಿ 40 ವರ್ಷಗಳು ಆಗಿರುತ್ತವೆ. ನನಗೆ ಮದುವೆಯ ದಿನಾಂಕ ಹೇಳಲು ಆಗುವುದಿಲ್ಲ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**